ಕೊಟ್ಟಿದೆ 10 ವರ್ಷ ಮಾಡಿದಮೇಲೂ ಖಾಯಂ ಮಾಡಿಲ್ಲ. ಅದರ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುವು ಏನು?

ಶ್ರೀ ಎಂ.ಸಿ. ನಾಣಯ್ಯ : ದಿನಗೂಲಿ ನೌಕರರ ಬಗ್ಗೆ ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ಗ್ಯಾಂಗ್ ವರ್ಕರ್ಸ ಯಾರಿದ್ದರು ಅವರಿಗೆ ಸಂಬಂಧಪಟ್ಟ ಹಾಗೆ ಸುಪ್ರೀಂ ಕೋರ್ಟನವರು ಒಂದು ಆರ್ಡ್ಲೆ ಮಾಡಿರತಕ್ಕಂಥಾದ್ದು ಇದೆ. 'ಆ ಒಂದು ಆರ್ಡ್ಲೆ ಪ್ರಕಾರ ಪಿ.ಡಬ್ಲ್ಯೂ.ಡಿ. ಇಲಾಖೆಯವರು ಆ ಗ್ಯಾಂಗ್ ವರ್ಕರ್ಸಗೆ ಒಂದು ಫಿಟ್ ಮೆಂಟ್ ಅನ್ನು ಕೊಟ್ಟು ಒಂದು ಹಂತದಲ್ಲಿ ಅವರನ್ನೆಲ್ಲಾ ಮಾಡಿದ್ದಾರೆ. ಬಾಕಿ ಇರತಕ್ಕಂಥ ದಿನಗೂಲಿ ನೌಕರರ ಬಗ್ಗೆ ಈಗಿರತಕ್ಕಂಥಾದ್ದರಲ್ಲಿ 240 ದಿವಸ ಯಾವುದಾದರೂ ಒಂದು ವರ್ಷದಲ್ಲಿ ಕಂಟಿನ್ಯೂಯಸ್ ಆಗಿ ಖಾಲಿ ಇರತಕ್ಕಂಥ ಹುದ್ದೆಯಲ್ಲಿ ಕೆಲಸ ಮಾಡುತ್ತಿರುವವರು ಇದ್ದರೆ, ಆ ಇಲಾಖೆಯಲ್ಲಿ ಹೊಸದಾಗಿ ರಿಕ್ರೂಟ್ ಮೆಂಟ್ ಮಾಡುವಂತಹ ಸಂದರ್ಭ ಬಂದಾಗ ರೋಸ್ಟರ್ ನಿಯಮಕ್ಕೊಳಪಟ್ಟು ಅವರಿಗೆ ಆದ್ಯತೆ ಕೊಡಬೇಕು ಎಂದು ಇದೆ. ಅದನ್ನು ಸರ್ಕಾರ ಅನುಸರಿಸುತ್ತಿದೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ರೋಸ್ಟರ್ ಪದ್ಧತಿಯನ್ನು ಫಾಲೋ ಮಾಡುತ್ತಾರೊ ಇಲ್ಲವೋ ಎನ್ನುವ ಪ್ರಶ್ನೆಯನ್ನು ನಾನು ಕೇಳಬೇಕಾಗಿತ್ತು, ಅದಕ್ಕೆ ಮಾನ್ಯ ಮಂತ್ರಿಗಳು ಫಾಲೋ ಮಾಡುತ್ತೇವೆ ಎನ್ನುವ ಉತ್ತರವನ್ನು ಕೊಟ್ಟರು. ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿತ್ತು.

ಪಶು ಚಿಕಿತ್ಸಾ ಕೇಂದ್ರಗಳಿಗೆ ಔಷಧ ಪೂರೈಕೆ.

134 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96ನೇ ಸಾಲಿನ ಪಶುಚಿಕಿತ್ಸಾ ಕೇಂದ್ರಗಳಿಗೆ ಔಷಧಿ ಪೂರೈಸಲು ನಿಗಧಿ ಮಾಡಿದ ಹಣ ಎಷ್ಟು, ಹಾಗೂ ಆ ಪೈಕಿ 31-1-96ರ ವರೆಗೆ ವಿರ್ಚಾದ ಹಣ ಎಷ್ಟು?*

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಪಶುಪಾಲನಾ ಇಲಾಖೆಯ ರಾಜ್ಯ ವಲಯದಲ್ಲಿ ರೂ. 4.05 ಕೋಟಿ.

ಆ) ಈ ವರೆವಿಗೂ ರೂ. 3,45,42,663,00 ವಿರ್ಚಾಗಿದೆ.

ಶ್ರೀ ಯು.ಬಿ.ಬಣಕಾರ್ : ಮಾನ್ಯ ಅಧ್ಯಕ್ಷರೇ, 1995-96ರಲ್ಲಿ ಪಶು ಚಿಕಿತ್ಸಾ ಕೇಂದ್ರಗಳಿಗೆ ಔಷಧ ಒದಗಿಸಲು ನಿಗದಿ ಮಾಡಿದಂತಹ ಹಣ 4 ಕೋಟಿ 5 ಸಾವಿರ ರೂಪಾಯಿಗಳಲ್ಲಿ ಇದುವರೆಗೂ 3 ಕೋಟಿ 45 ಲಕ್ಷ ರೂಪಾಯಿಗಳನ್ನು ವಿರ್ಚು ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶದ ಪಶು ಚಿಕಿತ್ಸಾಲಯಗಳಲ್ಲಿ ಈ ಬಗ್ಗೆ ವಿಚಾರಮ್ಮಾಡಿದರೆ ಕೇವಲ ಡೈರೆಕ್ಟರ್ ಕ್ವೋಟಾದಲ್ಲಿ ಫೆಬ್ರುವರಿಯಲ್ಲಿ ನೂರು ಪರ್ಸೆಂಟ್ ಔಷಧ ಪೂರೈಕೆಯಾಗಿದೆ. ನಾವು ವರ್ಷದ ಕೊನೇ ತಿಂಗಳಿನಲ್ಲಿ ಇದ್ದೇವೆ. ಪ್ರತಿವರ್ಷ ಏನು ತೊಂದರೆಯಾಗುತ್ತದೆಯೆಂದರೆ ವರ್ಷದ ಕೊನೆಯಲ್ಲಿ ಇವರು ಹಣ ವಿರ್ಚು ಮಾಡುವುದರಿಂದ ಇಡೀ ವರ್ಷ ಗ್ರಾಮೀಣ ಭಾಗದ ಪಶು ಚಿಕಿತ್ಸಾಲಯಕ್ಕೆ ಔಷಧ

ಪೂರೈಕೆಯಾಗುತ್ತಿಲ್ಲ. ಆದುದರಿಂದ ದಯವಿಟ್ಟು ಇದಕ್ಕೆ ನಾಲ್ಕು ಪಂತ ಮಾಡಿ ಮೂರು ತಿಂಗಳಿಗೊಮ್ಮೆ ಔಷಧಿಯನ್ನು ಪೂರೈಕೆ ಮಾಡಿದರೆ ಪಶು ಚಿಕಿತ್ಸಾಲಯಕ್ಕೆ ಅನುಕೂಲವಾಗುತ್ತದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಪಶು ವೈದ್ಯಕೀಯ ಸಂಸ್ಥೆಗಳು 3,437 ಇವೆ. ಅದರಲ್ಲಿ ಪಶು ಆಸ್ಪತ್ರೆಗಳು 244, ಪಶು ಚಿಕಿತ್ಸಾಲಯಗಳು 700, ಪ್ರಾಥಮಿಕ ಪಶು ಚಿಕಿತ್ಸಾಲಯಗಳು 1,920, ಸಂಚಾರಿ ಪಶು ಚಿಕಿತ್ಸಾಲಯಗಳು 173, ಕೃತಕ ಗರ್ಭಾಧಾರಣ ಕೇಂದ್ರಗಳು 400 ಒಟ್ಟು ಎಲ್ಲಾ 3,437 ಇವೆ. ಅದರಲ್ಲಿ ಪಶು ಆಸ್ಪತ್ರೆಗೆ 25 ಸಾವಿರ ರೂಪಾಯಿ ಮೌಲ್ಯದ ಔಷಧ, ಪಶು ಚಿಕಿತ್ಸಾಲಯಕ್ಕೆ 15 ಸಾವಿರ ರೂಪಾಯಿ ಮೌಲ್ಯದ ಔಷಧ, ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಿಗೆ 10 ಸಾವಿರ ರೂಪಾಯಿ ಮೌಲ್ಯದ ಔಷಧ ಮತ್ತು ಸಂಚಾರಿ ಪಶು ಚಿಕಿತ್ಸಾಲಯಗಳಿಗೆ 15 ಸಾವಿರ ರೂಪಾಯಿ ಹಾಗೂ ಕೃತಕ ಗರ್ಭಾಧಾರಣಾ ಕೇಂದ್ರಕ್ಕೆ 5 ಸಾವಿರ ರೂಪಾಯಿ ಮೊತ್ತವನ್ನು ನಾವು ಕೊಡುತ್ತೇವೆ. ನಮ್ಮಲ್ಲಿ ಜಾನುವಾರು ಸಂಪತ್ತು ಇರುವಂತಾದ್ದು ಒಟ್ಟು 4 ಕೋಟಿ 6 ಲಕ್ಷ ಸಂಖ್ಯೆ ಇದೆ. ನಮ್ಮ ಒಟ್ಟು ಹಣಕಾಸು ಮೊತ್ತ ಇರುವುದು ವರ್ಷಕ್ಕೆ 4 ಕೋಟಿ 5 ಲಕ್ಷ ರೂಪಾಯಿಗಳು. ಅದರಲ್ಲಿ ಜಿಲ್ಲಾಪಂಚಾಯತ್ ವಲಯದಿಂದ 10 ಲಕ್ಷ ರೂಪಾಯಿಯಂತೆ 20 ಜಿಲ್ಲೆಗಳಿಂದ 2 ಕೋಟಿ ರೂಪಾಯಿ ಆಗುತ್ತದೆ. ಶೀಫ್ ಬೋರ್ಡಿನಿಂದ 1 ಕೋಟಿ 75 ಲಕ್ಷ ರೂಪಾಯಿ ಕೊಡುತ್ತೇವೆ. ಈ ರೀತಿಯಾಗಿ ಒಟ್ಟು ಐದೂವರೆ ಅಥವಾ ಎಂಟು ಕೋಟಿ ರೂಪಾಯಿ ಕೊಡುತ್ತೇವೆ. ಒಂದು ಜಾನುವಾರಿಗೆ 2 ರೂಪಾಯಿ ಲೆಕ್ಕದಂತೆ ಔಷಧವನ್ನು ಒದಗಿಸುವ ಕಾರ್ಯಕ್ರಮ ಮಾಡುತ್ತಿದ್ದೇವೆ. ಈ ವರ್ಷ 3,45,42,000 ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನು ಉಳಿದಂತಹ 59 ಲಕ್ಷ 57 ಸಾವಿರ ರೂಪಾಯಿಗಳನ್ನು ಈಗಾಗಲೇ 9 ವಿವಿಧ ದರ ಗುತ್ತಿಗೆ ಔಷಧ ಸರಬರಾಜು ಮಾಡುವ ಸಂಸ್ಥೆಗಳಿಗೆ ಆದೇಶ ಕೊಟ್ಟು, ಅವರು ಸರಬರಾಜು ಮಾಡುತ್ತಾರೆ. ಆ ಪ್ರಸ್ತಾವನೆಯನ್ನು ಸರ್ಕಾರ ಕ್ಲಿಯರ್ ಮಾಡಿದೆ. ಹಾಗೂ ವರ್ಷದಲ್ಲಿ ಎರಡು ಬಾರಿ ಔಷಧಗಳನ್ನು ಸರಬರಾಜು ಮಾಡುವ ವ್ಯವಸ್ಥೆಯಿದೆ. ಇದು ನಮ್ಮ ಕಾರ್ಯ. ಒಂದು ಜಾನುವಾರಿಗೆ 2 ರೂಪಾಯಿ ಕೊಡುತ್ತೇವೆ. ಇದು ನಮ್ಮ ಆರ್ಥಿಕ ವ್ಯವಸ್ಥೆ.

ಶ್ರೀ ಯು.ಬಿ. ಬಣಕಾರ್ : ತಾವು ವರ್ಷದಲ್ಲಿ 2 ಸಲ ಸರಬರಾಜು ಮಾಡುತ್ತೇವೆ ಎಂದು ಹೇಳಿದೆ. ಆದರೆ ಅದು ಸರಿಯಾಗಿ ಕಾರ್ಯರೂಪಕ್ಕೆ ಬರುತ್ತಿಲ್ಲ. ಕಳೆದ 1994-95ನೇ ಸಾಲಿನಲ್ಲಿ ನಿಗದಿ ಮಾಡಿದಂತಹ 3 ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡುವುದಕ್ಕಾಗಲಿಲ್ಲ. ನೀವು ಫೆಬ್ರುವರಿ, ಮಾರ್ಚ್ ತಿಂಗಳಿನಲ್ಲಿ ಟೆಂಡರ್ ಕರೆದು ಕೊಡುತ್ತೇವೆ, ಎಂದರೆ ಔಷಧ ನಮಗೆ ಬಂದು ಮುಟ್ಟುವುದಿಲ್ಲ. ಮಾರ್ಚ್ ತಿಂಗಳು ಮುಗಿಯಿತು ಎಂದರೆ ಹಣ ಲ್ಯಾಪ್ಸ್ ಆಗಿಬಿಡುತ್ತದೆ. ಆದುದರಿಂದ ಪ್ರತಿ ಮೂರು ತಿಂಗಳಿಗೊಮ್ಮೆ ಸರಬರಾಜು ಮಾಡುವಂತೆ ನಿಗದಿ ಮಾಡಿ ಪ್ರತಿಯೊಂದು ದವಾಖಾನೆಗೆ ಸರಬರಾಜು ಮಾಡುವಂತಹ ವ್ಯವಸ್ಥೆಯನ್ನು ಮುಂದಿನ ಸಾಲಿನಿಂದಲಾದರೂ ಮಾಡಲಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಬಚ್ಚೇಗೌಡ : ನಮ್ಮಲ್ಲಿ ಯಾವತ್ತೂ ಲ್ಯಾಪ್ಸ ಆಗಿಲ್ಲ, ಅವರು ಹೇಳಿರುವ ಹಾಗೆ ಮೂರು ತಿಂಗಳಿಗೆ ಸರಬರಾಜು ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇನೆ.

ಡಾ. ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ಅನೇಕ ಪಶು ಚಿಕಿತ್ಸಾಲಯಗಳಲ್ಲಿ ಈ ಆಂಟಿ ರೇಬಿಸ್ ವ್ಯಾಕ್ಸಿನ್ ಅನ್ನ ಸಪ್ಲೈ ಮಾಡತಕ್ಕಂಥದ್ದನ್ನು ಸರ್ಕಾರ ಬಂದ್ ಮಾಡಿದೆ, ಆ ರೀತಿ ಏತಕ್ಕಾಗಿ ಬಂದ್ ಮಾಡಿದೆ ಎಂಬುದನ್ನು ನಾನು ತಿಳಿಯಬಯಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಈ ಪ್ರಶ್ನೆಗೆ ಉತ್ತರವನ್ನು ಸ್ವಲ್ಪ ಸಮಯದ ನಂತರ ಹೇಳುತ್ತೇನೆ.

ಡಾ.ಎಂ.ಪಿ. ಕರ್ಕಿ : ಇದು ಬಹಳ ಪ್ರಾಮುಖ್ಯವಾಗಿರತಕ್ಕಂಥದ್ದು, ಹುಚ್ಚುನಾಯಿ ಕಡಿದಾಗ ಆಂಟಿ ರೇಬಸ್ ವ್ಯಾಕ್ಸಿನ್ ಕೊಡದೇ ಹೋದರೆ ಅದು ಸತ್ತುಹೋಗತಕ್ಕಂಥದ್ದು, ಅಂತಹ ಒಂದು ಉಪಯುಕ್ತವಾಗಿರತಕ್ಕಂಥ ಅವಶ್ಯಕವಾದ ಔಷಧಿಯನ್ನು ಈ ಸಾಲಿನಿಂದ ಸರ್ಕಾರ ಬಂದ್ ಮಾಡುವುದಕ್ಕೆ ಕಾರಣ ಏನು?

ಅಧ್ಯಕ್ಷರು : ತಮ್ಮ ಪ್ರಶ್ನೆ ಸರಿಯಾಗಿದೆ, ಆದರೆ ಅವರ ಹತ್ತಿರ ಉತ್ತರ ಸಿದ್ಧ ಇರುವುದಿಲ್ಲ. ಅವರಿಗೆ ಏನು ಪ್ರಶ್ನೆ ಇರುತ್ತದೆ, ಅದಕ್ಕೆಷ್ಟೆ ಅಧಿಕಾರಿಗಳು ಸಿದ್ಧರಾಗಿ ಬಂದಿರುತ್ತಾರೆ, ತಾವು ಬೇರೆ ನೋಟೀಸನ್ನು ಕಳುಹಿಸಿದರೆ ಅದಕ್ಕೆ ಉತ್ತರವನ್ನು ಒದಗಿಸುತ್ತಾರೆ.

ಡಾ: ಯು. ಚಿತ್ತರಂಜನ್ : ನಮ್ಮ ಉತ್ತರ ಕನ್ನಡ ಜಿಲ್ಲೆಯ ಪಶುಸಂಗೋಪನಾ ಖಾತೆಯಲ್ಲಿ ಔಷಧಿಯ ಖರೀದಿ ಮತ್ತು ಔಷಧಿಯ ಸ್ಟಾಂಡರ್ಡ ಬಗ್ಗೆದೊಡ್ಡ ಸ್ಕ್ಯಾಂಡಲ್ ಆಗಿ ಅಲ್ಲಿ ಎಲ್ಲಾ ಸ್ಥಳೀಯ ಪತ್ರಿಕೆಗಳು ಒಂದುವಾರ ಅದರ ಬಗ್ಗೆ ಬರೆದಿದ್ದಾರೆ. ಅದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೆ? ಮತ್ತು ಪಶುಸಂಗೋಪನಾ ಇಲಾಖೆಯಲ್ಲಿ ಔಷಧಗಳ ಸ್ಟಾಂಡರ್ಡ ಅನ್ನು ಪರೀಕ್ಷೆ ಮಾಡಲಿಕ್ಕೆ ಏನು ವ್ಯವಸ್ಥೆ ಇದೆ ಎಂದು ದಯವಿಟ್ಟುತಿಳಿಸಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಔಷಧಿಯ ದರಗುತ್ತಿಗೆಯನ್ನು ಕೊಡುವಂಥ ವ್ಯವಸ್ಥೆಯಲ್ಲಿ ಒಂದು ಟೆಕ್ನಿಕಲ್ ಕಮಿಟಿ ಮತ್ತು ಹೈ ಪವರ್ ಕಮಿಟಿ ಎಂದು ಎರಡು ಕಮಿಟಿಗಳಿವೆ. ಅದರಲ್ಲಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಮತ್ತು ನಮ್ಮ ನಿರ್ದೇಶಕರು, ನಮ್ಮ ಕಾರ್ಯದರ್ಶಿಗಳು ಎಲ್ಲ ಸದಸ್ಯರಾಗಿರುತ್ತಾರೆ. ಹಿಂದೆ ಎಸ್.ಪಿ.ಡಿ. ಎಂದು ಇತ್ತು ಅಂದರೆ ಸ್ಟೋರ್ ಪರ್ಚೇಸ್ ಡಿಪಾರ್ಟ್‌ಮೆಂಟ್ ಅದರ ಮೂಲಕ ಪರ್ಚೇಸ್ ಮಾಡುತ್ತಿದ್ದೆವು. ಅದನ್ನು ರದ್ದುಪಡಿಸಿ, ನಂತರ 1993ರಲ್ಲಿ ವಿಶೇಷವಾಗಿ ಟೆಕ್ನಿಕಲ್ ಕಮಿಟಿ ಮತ್ತು ಹೈ ಪವರ್ ಕಮಿಟಿ ಎಂದು ಮಾಡಿ ಆ ಮೂಲಕ ಸೆಲೆಕ್ಷನ್ ಮಾಡಿ ಔಷಧಿಗಳನ್ನು ಕೊಡುವಂಥ ವ್ಯವಸ್ಥೆ ಇದೆ. ಅವರು ಯಾವಯಾವ ಔಷಧಿಗಳನ್ನು ತೆಗೆದುಕೊಳ್ಳಬೇಕೆಂದು ತಿಳಿಸುತ್ತಾರೆ ಅಂತಹುದನ್ನು ಮಾತ್ರ ನಾವು ಕೊಂಡುಕೊಂಡು ಸರಬರಾಜು ಮಾಡುವಂಥ ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಇರತಕ್ಕಂಥದ್ದು.

ಶ್ರೀ ಕುಂಬೆ ಸುಂದರರಾವ್ : ಉತ್ತರಕನ್ನಡದಲ್ಲಿ ಆದ ಸ್ಕ್ಯಾಂಡಲ್ ಬಗ್ಗೆ ತಮ್ಮ ಗಮನಕ್ಕೆ ಬಂದಿದೆಯೋ ಹೇಗೆ?

ಶ್ರೀ ಬಿ.ಎನ್. ಬಚ್ಚೇಗೌಡ : ಜಿಲ್ಲಾಮಟ್ಟದಲ್ಲಿ ಔಷಧಿಗಳನ್ನು ಖರೀದಿ ಮಾಡುವಂಥ ವ್ಯವಸ್ಥೆ ಇಲ್ಲ. ಸೆಂಟ್ರಲ್ ಪೂಲ್ ನಲ್ಲಿ ಖರೀದಿ ವ್ಯವಸ್ಥೆ ಎಲ್ಲ ಮಾಡಿ ನಾವು ಜಿಲ್ಲಾವಾರು ಬೇಡಿಕೆಗಳನ್ನು ಪೂರೈಸುವಂತದ್ದು, ಆಯಾ ಜಿಲ್ಲಾವಾರು ಬೇಡಿಕೆಗಳಿಗೆ ಸರಬರಾಜು ಮಾಡುವಂತದ್ದು. ಜಿಲ್ಲಾಮಟ್ಟದಲ್ಲಿ ಖರೀದಿ ವ್ಯವಸ್ಥೆ ಯಾವುದೂ ಇಲ್ಲ.

ಅಧ್ಯಕ್ಷರು : ಡಾ: ಕರ್ಕಿಯವರ ಹೆಸರಿನಲ್ಲಿರುವ ಪ್ರಶ್ನೆ ಮತ್ತು ನಂಜಾಮರಿ ಹೆಸರಿನಲ್ಲಿರುವ ಪ್ರಶ್ನೆ ಎರಡಕ್ಕೂ ಗ್ರಾಮೀಣಾಭಿವೃದ್ಧಿ ಸಚಿವರು ಉತ್ತರವನ್ನು ಕೊಡಬೇಕಾಗಿತ್ತು. ಅವರು ಬರುವಂಥ ಟ್ರೈನ್ ತಡವಾಗಿರುವುದರಿಂದ, ಅವರ ಹೆಸರಿನಲ್ಲಿರುವ ಎಲ್ಲಾ ಪ್ರಶ್ನೆಗಳನ್ನು ತಡೆಹಿಡಿಯಲಾಗಿದೆ.

ಪ್ರಶ್ನೋತ್ತರ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 4-3-96ರ 9ನೇ ಪಟ್ಟಿಯಲ್ಲಿರುವ 54 ಪ್ರಶ್ನೆಗಳ ಪೈಕಿ 34 ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಚಕ್ರ ವರಾಹಿ ವಿದ್ಯುತ್ ಯೋಜನೆ ಕಾಮಗಾರಿ.

618 - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) *ಚಕ್ರಾ ವರಾಹಿ ಪುನರ್ವಸತಿ ಮತ್ತು ಪರಿಹಾರ ನೀಡುವ ಬಗ್ಗೆ ಹೈ ಪವರ್ ಕಮಿಟಿಯ ಎಷ್ಟು ಸಭೆಗಳಲ್ಲಿ ನಡೆಸಲಾಗಿದೆ,*

ಆ) *ಈ ಸಭೆಗಳಲ್ಲಿ ತಗದುಕೊಂಡ ನಿರ್ಣಯಗಳಲ್ಲಿ ಎಷ್ಟಕ್ಕೆ ಸರ್ಕಾರದ ಆದೇಶಗಳನ್ನು ಹೊರಡಿಸಲಾಗಿದೆ? ಸರ್ಕಾರಿ ಆದೇಶ ಹೊರಡಿಸಲು ಬಾಕಿ ಇರುವ ನಿರ್ಣಯಗಳೆಷ್ಟು? ಎಷ್ಟು ಸಮಯದಿಂದ ಬಾಕಿ ಉಳಿದಿದೆ?*

ಇ) *ಯಾವಾಗ ಸರ್ಕಾರಿ ಆಜ್ಞೆಯನ್ನು ಹೊರಡಿಸಲಾಗುವುದು?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹದಿನಾಲ್ಕು ಸಭೆಗಳನ್ನು ನಡೆಸಲಾಗಿದೆ.

ಆ) ಸರ್ಕಾರ ಆದೇಶ ಹೊರಡಿಸಲು ಬಾಕಿ ಇರುವ ನಿರ್ಣಯಗಳು ಎರಡು ಮಾತ್ರ. 28-4-94 ರಿಂದ ಬಾಕಿ ಇವೆ.

ಇ) ಬಾಕಿ ನಿರ್ಣಯಗಳ ಬಗ್ಗೆ ಸರ್ಕಾರಿ ಆದೇಶ ಹೊರಡಿಸಲು ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಮಾಹಿತಿಯನ್ನು ಪಡೆದ ಮೇಲೆ ಅದನ್ನು ಪರಿಶೀಲಿಸಿ ಸೂಕ್ತ ಸರ್ಕಾರಿ ಆಜ್ಞೆಯನ್ನು ಹೊರಡಿಸಲಾಗುವುದು.